***ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕ : 21.02.2025***

***<u>ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ವಕೀಲರಿಂದಃ</u>***

*1. ದಾವಾ ಷೆಡ್ಯೂಲ್ ಐಟಂ 2 ರ ಚೆಕ್ಕುಬಂದಿಯನ್ನು ನನಗೆ ಓದಲು ಮತ್ತು ಬರೆಯಲು ಬರೆದೇ ಇರುವುದರಿಂದ ಈಗ ಹೇಳಲು ನನ್ನಿಂದಾಗುವುದಿಲ್ಲ. ದಾವಾ ಷೆಡ್ಯೂಲ್ ಐಟಂ 2 ರ ಸ್ವಾಧೀನದಲ್ಲಿ ನಾನೇ ಇದ್ದೇನೆ. ದಾವಾ ಐಟಂ 2 ರ ಕಂದಾಯ ದಾಖಲಾತಿಗಳನ್ನು ನೀವು ನೋಡಿರುತ್ತೀರಾ ಎಂದರೆ ಸಾಕ್ಷಿ ನಾನು ನೋಡಿಲ್ಲ ನನ್ನ ಅಣ್ಣ ನೋಡಿಕೊಳ್ಳುತ್ತಾರೆಂದು ಹೇಳುತ್ತಾರೆ. ಸಾಕ್ಷಿ ಸುಳ್ಳು ದಾಖಲೆಗಳನ್ನು ಮಾಡಿಕೊಂಡು 1 ನೇ ಪ್ರತಿವಾದಿ ಮಾಡಿಕೊಂಡಿದ್ದಾರೆಂದು ಹೇಳುತ್ತಾರೆ. 1 ನೇ ಪ್ರತಿವಾದಿ 2021 ಕ್ಕೆ ಮೊದಲು ಬೇಬಿ ಗ್ರಾಮದಲ್ಲೆ ವಾಸವಿದ್ದರು.*

*2. ದಾವಾ ಷೆಡ್ಯೂಲ್ ಐಟಂ 2 ರ ಆಸ್ತಿ ಮೊದಲು ಯಾರ ಹೆಸರಿನಲ್ಲಿ ಇತ್ತು ಎಂದರೆ ಸಾಕ್ಷಿ ನಮ್ಮ ತಂದೆ ಹೆಸರಿನಲ್ಲಿತ್ತು ಎಂದು ಹೇಳುತ್ತಾರೆ. ದಾವಾ ಷೆಡ್ಯೂಲ್ ಐಟಂ 2 ರ ಆಸ್ತಿ ಮೊದಲು ತಿಮ್ಮಶೆಟ್ಟಿ ಎಂಬುವವರ ಹೆಸರಿನಲ್ಲಿತ್ತು ಎಂದರೆ ಸರಿಯಲ್ಲ. ನಿಮ್ಮ ತಂದೆ ಅಣ್ಣಯ್ಯಶೆಟ್ಟಿ ಹಾಗು ನಿಮ್ಮ ಚಿಕ್ಕಪ್ಪ ತಿಮ್ಮಶೆಟ್ಟಿರವರು ಸುಮಾರು 50 ವರ್ಷಗಳ ಹಿಂದೆಯೇ ವಿಭಾಗ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಆ ವಿಭಾಗದಲ್ಲಿ ದಾವಾ ಐಟಂ 2 ತಿಮ್ಮಶೆಟ್ಟಿರವರಿಗೆ ಬಂದಿತ್ತು ಎಂದರೆ ಸರಿಯಲ್ಲ.*

3. 1 ನೇ ಪ್ರತಿವಾದಿ ಕೂಲಿ ಕೆಲಸಕ್ಕಾಗಿ ಕೆ ಆರ್ ಪೇಟೆ ತಾಲ್ಲೂಕು, ಬೂಕನಕೆರೆ ಹೋಬಳಿ, ಮೊದೂರಿನಲ್ಲಿ ವಾಸವಿದ್ದರು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ತಂದೆ ತಾಯಿ ಸತ್ತಾಗ ಅಥವಾ ಬೇರೆ ದಾರ್ಮಿಕ ಕಾರ್ಯಕ್ರಮಗಳು ಇದ್ದಾಗ ಮಾತ್ರ ಬೇಬಿ ಗ್ರಾಮಕ್ಕೆ ಬರುತ್ತಿದ್ದರು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ವಿಳಾಸದ ಪುರಾವೆ ದಾಖಲಾತಿಗಳು ಮೋದೂರಿನಲ್ಲಿವೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಅವರ ಕೂಲಿ ಮಾಡಿ ಸಂಪಾದನೆ ಮಾಡಿದ ಹಣದಿಂದ ದಾವಾ ಷೆಡ್ಯೂಲ್ ಐಟಂ 2 ರ ಆಸ್ತಿಯನ್ನು ತಿಮ್ಮಶೆಟ್ಟಿರವರಿಂದ ಖರೀದಿ ಮಾಡಿದ್ದಾರೆಂದರೆ ಸರಿಯಲ್ಲ. ದಾವಾ ಐಟಂ 2 ರ ಸ್ವಾಧೀನಾನುಭವದಲ್ಲಿ 1 ನೇ ಪ್ರತಿವಾದಿ ಇದ್ದಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ನಿಮ್ಮ ತಾಯಿ ಮರಣವಾದ ನಂತರ ಬೇಬಿ ಗ್ರಾಮಕ್ಕೆ ಬಂದು ವಾಸವಿರುತ್ತಾರೆಂದರೆ ಸರಿಯಲ್ಲ.

4. ನಿಮ್ಮ ತಾಯಿ ಮರಣ ಆಗುವ ತನಕ ನಿಮ್ಮ ಮನೆಯ ವ್ಯವಹಾರವನ್ನು ನಿಮ್ಮ ತಾಯಿ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ನಿಮ್ಮ ಕುಟುಂಬದ ವ್ಯವಹಾರದಲ್ಲಿ ಭಾಗವಹಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಈಗ್ಗೆ ಸುಮಾರು 40 ವರ್ಷಗಳ ಹಿಂದೆ ದಾವಾ ಐಟಂ 2 ನ್ನು ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ದಾವಾ ಐಟಂ 2 ರ ಕಂದಾಯ ದಾಖಲಾತಿಗಳನ್ನು 1 ನೇ ಪ್ರತಿವಾದಿ ಬದಲಾವಣೆ ಮಾಡಿಕೊಂಡಿರುವುದನ್ನು ನಾನು ಯಾವುದೇ ಅಧಿಕಾರಿ ಮುಂದೆ ಅಥವಾ

ಪ್ರಾಧಿಕಾರದ ಮುಂದೆ ಪ್ರಶ್ನಿಸಿಲ್ಲ. ನೀವು ಮತ್ತು 1 ನೇ ಪ್ರತಿವಾದಿ ಬೇರೆ ಬೇರೆ ಇರುತ್ತೀರಾ ಎಂದರೆ ಸಾಕ್ಷಿ ಜಗಳವಾಗುವ ತನಕ ಒಟ್ಟಿಗೆ ಇದ್ದೆವು ಎಂದು ಹೇಳುತ್ತಾರೆ. ಈಗ್ಗೆ ಎರಡು ವರ್ಷಗಳ ಹಿಂದೆ ಸಣ್ಣಪುಟ್ಟ ವಿಚಾರಕ್ಕಾಗಿ ಜಗಳವಾಯಿತು.

5. ದಾವಾ ಷೆಡ್ಯೂಲ್ ಐಟಂ 2 ರ ಆಸ್ತಿಯ ಮೇಲೆ ನಿಮಗೆ ಹಕ್ಕಿಲ್ಲ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಐಟಂ 2 ಒಂದನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ದುರುದ್ದೇಶದಿಂದ ದಾವಾ ಷೆಡ್ಯೂಲ್ ಐಟಂ 2 ನ್ನು ಈದಾವೆಯಲ್ಲಿ ಸೇರಿಸಿದೆ ಎಂದರೆ ಸರಿಯಲ್ಲ. ಆಸ್ತಿ ಲಪಟಾಯಿಸುವ ಉದ್ದೇಶದಿಂದ ಪಿತ್ರಾರ್ಜಿತ ಆಸ್ತಿ ಎಂದು ದಾವಾ ಷೆಡ್ಯೂಲ್ ಐಟಂ 2 ನ್ನು ಹೇಳುತ್ತಿದ್ದೇನೆ ಮತ್ತು ಸುಳ್ಳು ಸಾಕ್ಷಿ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗೊಳಿಸಲಾಯಿತು.**

**ಓ ಹೇ ಕೇ ಸ ಇ ಒ**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಪಾಂಡವಪುರ.**